**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವಗೌಡ ಬಾದರ್ಲಿ ಇವರು ನಿಯಮ-72ರಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:**

**ಇಡೀ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೇವಲ ಒಂದೇ ಒಂದು 'ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ'ಯಿದ್ದು, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಾನೂನು ಸುವ್ಯವಸ್ಥೆಗಳನ್ನು ಕಾಪಾಡುವ ಸಮಯದಲ್ಲಿ ಕೆ.ಎಸ್.ಆರ್.ಪಿ. ತುಕಡಿಗಳನ್ನು ನೆರೆಯ ಜಿಲ್ಲೆಯ ಕಲಬುರಗಿ ಘಟಕದಿಂದ ನಿಯೋಜಿಸಲಾಗುತ್ತಿದ್ದು, ಸದರಿ ಸ್ಥಳದಿಂದ ಜಿಲ್ಲೆಯನ್ನು ತಲುಪಲು ಅಂದಾಜು ಸುಮಾರು 4.00 ರಿಂದ 4.30 ಗಂಟೆಗಳ ಸಮಯ ತಗುಲಲಿದ್ದು, ಇದರಿಂದ ತುರ್ತು ಸೇವೆ ಒದಗಿಸಲು ಕಷ್ಟಸಾಧ್ಯವಾಗುವುದರಿಂದ ರಾಯಚೂರು ಜಿಲ್ಲೆಯ ಕಾನೂನು ಸುವ್ಯವಸ್ಥೆ, ಬಂದೋಬಸ್ತು, ವಿ.ವಿ.ಐ.ಪಿ. ಭದ್ರತೆ, ಜಿಲ್ಲೆಯ ಸುರಕ್ಷತೆ ಹಾಗೂ ಗಡಿ ಭಾಗದ ಸುರಕ್ಷತೆಗಾಗಿ ರಾಯಚೂರು ಜಿಲ್ಲೆಯಲ್ಲಿ 13ನೇ ಕೆ.ಎಸ್.ಆರ್.ಪಿ. ತುಕಡಿಯನ್ನು ಸ್ಥಾಪಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.**

**ಉತ್ತರ:**

2025-26ನೇ ಸಾಲಿನಲ್ಲಿ ರಾಜ್ಯ ಕೆ.ಎಸ್.ಆರ್.ಪಿ. ಘಟಕದಲ್ಲಿ 02 ಭಾರತೀಯ ಮೀಸಲು ಪಡೆಗಳನ್ನು ಒಟ್ಟಾರೆ 2014 ಹುದ್ದೆಗಳೊಂದಿಗೆ ಹೊಸದಾಗಿ ಸೃಜಿಸಲು ಸಹಮತಿ ನೀಡಲಾಗಿದೆ. ಈ 02 ಭಾರತೀಯ ಮೀಸಲು ಪೊಲೀಸ್ ಪಡೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಳ್ಳ ಬೇಕಾಗಿರುವುದರಿಂದ, ಪ್ರಸಕ್ತ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆ.ಎಸ್.ಆರ್.ಪಿ. ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

**ಸಂಖ್ಯೆ: ಹೆಚ್‌ಡಿ 215 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.